**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 26/2019
ಪಿಡಬ್ಲು : 12 ಸಿಡಬ್ಲು :20

ಸಾಕ್ಷಿಯ ಹೆಸರು : ಶ್ರೀ ಕರ್ರೆ ಬಾಲಚಂದ್ರಿ
ತಂದೆಯ ಹೆಸರು : ಶ್ರೀ ಲಕ್ಷ್ಮಯ್ಯ
ವಯಸ್ಸು : 35 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ್ತವ್ಯ : ಕೊಂಡನಗೂಲ ಗ್ರಾಮ, ಬಲಮೂರು ಮಂಡಲಂ, ಜಿಲ್ಲೆಃ ನಾಗರ ಕರ್ನೂಲ, ರಾಜ್ಯಃ ತೆಲಂಗಾಣ
ದಿನಾಂಕ : 17-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

[ಸಾಕ್ಷಿಗೆ ತೆಲಗು ಭಾಷೆ ಹೊರತುಪಡಿಸಿ ನ್ಯಾಯಾಲಯದ ಭಾಷೆಯಾದ ಕನ್ನಡ, ಆಂಗ್ಲ ಭಾಷೆ ತಿಳಿಯದೇ ಇರುವುದರಿಂದ ತೆಲಗು ಭಾಷೆಯನ್ನು ಚೆನ್ನಾಗಿ ಮಾತನಾಡಲು ಮತ್ತು ಬರೆಯಲು ಬಲ್ಲವರಾದಂತಹ ಶ್ರೀ.ಶ್ರೀನಾಥ ಹಣಮಂತ ಮದ್ರಾಸಿ, ಸಾಃ ಚಿಕ್ಕೋಡಿ ಇವರನ್ನು ಭಾಷಾಂತರಕಾರರಾಗಿ ತನಿಖಾ ಸಮಯದಲ್ಲಿ ಹಾಜರಿದ್ದು ಸಾಕ್ಷಿದಾರರ ಹೇಳಿಕೆಗಳನ್ನು ತರ್ಜುಮೆ ಮಾಡಿದವರಾಗಿರುತ್ತಾರೆ. ಅವರ ಸಹಾಯದಿಂದ ಸಾಕ್ಷಿಯ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಸದರಿಯವರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.]

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 21 ಕರ್ರೆ ಮಲ್ಲೇಶ್ವರಿ ನನ್ನ ಹೆಂಡತಿ, ಚಾಸಾಃ 6 ರಿಂದ ಚಾಸಾಃ 19, ಚಾಸಾಃ 22 ರಿಂದ ಚಾಸಾಃ 36 ರವರು ನನಗೆ ಗೊತ್ತಿರುತ್ತಾರೆ. ನಾವೆಲ್ಲ ಒಟ್ಟಿಗೆ ಕೆಲಸಕ್ಕೆ ಹೋಗುತ್ತೇವೆ. ಚಾಸಾಃ 24 ರವರೂ ಸಹ ನನ್ನೊಂದಿಗೆ ಕೆಲಸಕ್ಕೆ ಬಂದಿದ್ದರು.

2. 1 ಮತ್ತು 2ನೇ ಆರೋಪಿತರು ನನಗೆ ಗೊತ್ತಿರುತ್ತಾರೆ. 3 ಮತ್ತು 4 ನೇ ಆರೋಪಿತರು ನನಗೆ ಗೊತ್ತಿರುವುದಿಲ್ಲ. 1 ಮತ್ತು 2ನೇ ಆರೋಪಿತರು ನನಗೆ ನಮ್ಮೂರಿನಿಂದ ಕೆಲಸಕ್ಕಾಗಿ ಚಿಕ್ಕೋಡಿಗೆ ಕರೆದುಕೊಂಡು ಬಂದಿರುತ್ತಾರೆ. ನಾನು GVR ಕಂಪನಿಯ ಕಾಂಟ್ರ್ಯಾಕ್ಟರವರ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇನು. ನನಗೂ ಮತ್ತು ನನ್ನ ಹೆಂಡತಿ ಚಾಸಾಃ 21 ರವರಿಗೆ ಸೇರಿ ರೂ.18,000/- ಹಣವನ್ನು ಮುಂಗಡವಾಗಿ ಪಡೆದಿದ್ದು, ತಿಂಗಳಿಗೆ ರೂ.3,500/- ಹಣ ನೀಡುತ್ತೇವೆ ಎಂದು ಹೇಳಿ ಆರೋಪಿತರು ನಮ್ಮನ್ನು ಕೆಲಸಕ್ಕೆ ಕರೆದುಕೊಂಡು ಬಂದಿದ್ದರು.

3. ನಮಗೆ 9 ತಿಂಗಳು ಕೆಲಸ ಕೊಡುತ್ತೇವೆ ಎಂದು ಹೇಳಿ ನಮ್ಮನ್ನು ಕರೆದುಕೊಂಡು ಬಂದಿದ್ದರು. ನಾವು ಎರಡು ತಿಂಗಳು ಕೆಲಸ ಮಾಡಿದ್ದೇವೆ. ನಂತರ ನಾವು ಕೆಲಸ ಮಾಡುತ್ತಿದ್ದಾಗ ಪೋಲಿಸರು ಬಂದು ನಮ್ಮನ್ನು ಕರೆದುಕೊಂಡು ಬಂದಿದ್ದಾರೆ. ನಾವು ಕೆಲಸ ಮಾಡಿದ ಎರಡು ತಿಂಗಳ ಅವಧಿಯಲ್ಲಿ ಕಾಂಟ್ರ್ಯಾಕ್ಟರವರು ನಮಗೆ ರೂ.3,500/- ರಂತೆ ಹಣ ನೀಡಿರುವುದಿಲ್ಲ. ಆ ಹಣವನ್ನು ಮುಂಗಡ ಹಣದಲ್ಲಿ ಕಡಿತಗೊಳಿಸಿದ್ದಾರೆ.

4. ನಾವು ಕೆಲಸ ಮಾಡುತ್ತಿದ್ದ ಜಾಗದಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದೇವು. ಅಲ್ಲಿ ಸುಮಾರು 10-15 ಗುಡಿಸಲುಗಳು ಇದ್ದವು. 1 ಮತ್ತು 2ನೇ ಆರೋಪಿತರು ನಮಗೆ ಊಟಕ್ಕೆ ಅನ್ನ, ಸಾಂಬಾರ ಮತ್ತು ಕಾಯಿಪಲ್ಲೆ ಕೊಡುತ್ತಿದ್ದರು. ನಮಗೆ 15 ದಿನಗಳಿಗೆ ಒಂದು ದಿನ ರಜೆ ನೀಡುತ್ತಿದ್ದರು. ನಮಗೆ ಆರೋಗ್ಯ ಸರಿ ಇಲ್ಲದೇ ಇದ್ದಾಗ ಆರೋಪಿತರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸುತ್ತಿದ್ದರು. ಇಲ್ಲದಿದ್ದರೇ ನಾವೇ ಆಸ್ಪತ್ರೆಗೆ ಹೋಗಿ ತೋರಿಸಿಕೊಳ್ಳುತ್ತಿದ್ದೇವು. ಒಂದು ದಿನ ಕೆಲಸಕ್ಕೆ ಹೋಗದೇ, ಮೇಸ್ತ್ರಿಯವರಿಗೆ ಹೇಳದೇ ಉಳಿದುಕೊಂಡರೆ, ಎರಡು ದಿನ ಗೈರು ಹಾಜರು ಎಂದು ಬರೆಯುತ್ತಿದ್ದರು.

5. ಬೆಳಗ್ಗೆ 8:00 ಗಂಟೆಯಿಂದ ಸಂಜೆ 6:00 ರಿಂದ 6:30 ಗಂಟೆಯವರೆಗೆ ಕೆಲಸ ಇರುತ್ತಿತ್ತು. ಮಧ್ಯಾಹ್ನ 1:00 ಗಂಟೆಯಿಂದ 2:00 ಗಂಟೆ ಊಟದ ಸಮಯ ಇದ್ದು,

ಮೇಸ್ತ್ರಿಯವರೇ ಊಟ ಕೊಡುತ್ತಿದ್ದರು. ಕೆಲಸ ಮುಗಿದ ನಂತರ ಅವಶ್ಯಕತೆ ಇದ್ದಾಗ ನಾವು ಹೊರಗೆ ಹೋಗಿ ಬರುತ್ತಿದ್ದೇವು.

6. ಪೋಲಿಸರು, ಲೇಬರ ಆಫೀಸರವರು, ನಾಗಭೂಷಣ ಅವರು ಬಂದು ನಮ್ಮನ್ನು ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಪೋಲಿಸರು ನಮ್ಮ ಹೇಳಿಕೆಯನ್ನು ಪಡೆದುಕೊಂಡರು. ನಂತರ ನಮ್ಮನ್ನು ಅಂಬೇಡ್ಕರ ಸಮುದಾಯ ಭವನದಲ್ಲಿ ಇರಿಸಿದ್ದರು. ನಾನು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಇದ್ದ ವ್ಯವಸ್ಥೆ ಬಗ್ಗೆ ಪೋಲಿಸರಿಗೆ ಹೇಳಿದ್ದೇನೆ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿಯಾಗಿದ್ದು ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 12-11-2016 ರಂದು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ " ನಾವು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ನಮಗೆ ಚಿಕ್ಕದಾದ ಗುಡಿಸಲನ್ನು ಹಾಕಿ, ವಾಸ ಮಾಡುತ್ತಿದ್ದ ಗುಡಿಸಿಲಿನಿಂದ ಹೊರಗಡೆ ತಿರುಗಾಡಲು ಯಾವುದೇ ಸ್ವಾತಂತ್ರ್ಯ ನೀಡಿರಲಿಲ್ಲ, ನಮ್ಮ ಕಾವಲಿಗಾಗಿ ಭದ್ರತಾ ಸಿಬ್ಬಂದಿಯವರನ್ನು ನೇಮಿಸಿದ್ದರು " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆ ಭಾಗವನ್ನು ನಿಪಿ-15 ಎಂದು ಗುರುತಿಸಲಾಯಿತು.

2. " ನಮಗೆ ಆರೋಗ್ಯ ಸರಿ ಇಲ್ಲದೇ ಇದ್ದಾಗ ಔಷದೋಪಚಾರವನ್ನು ಮಾಡುತ್ತಿರಲಿಲ್ಲ " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆ ಭಾಗವನ್ನು ನಿಪಿ-

15 [ಎ] ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಮಗೆ ಮೇಸ್ತ್ರಿಯವರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದು ಅವರು ಇಲ್ಲದೇ ಇದ್ದಾಗ ಬೇರೆಯವರಿಗೆ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಹೇಳುತ್ತಿದ್ದರು, ಅಥವಾ ನಾವೇ ಆಸ್ಪತ್ರೆಗೆ ಹೋಗುತ್ತಿದ್ದೇವು ಎಂದು ಹೇಳಿದ್ದಾರೆ. ಈಗ ಆರೋಪಿತರು ನಮ್ಮನ್ನು ಕೆಲಸಕ್ಕೆ ಕರೆದುಕೊಂಡು ಹೋಗುತ್ತಿರುವುದಿಲ್ಲ.

3. ನಿಪಿ-15 ಮತ್ತು ನಿಪಿ-15 ಎ ಪ್ರಕಾರ ಪೋಲಿಸರ ಮುಂದೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ. ಬಿ.ಜೆ.ಜಿ ವಕೀಲರಿಂದ ಆರೋಪಿತರ ಪರವಾಗಿ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.